ಕಾರ್ಯರೂಪಕ್ಕಿಳಿಯತೊಡಗಿದ್ದವು. ಜೊತೆಗೆ, ಹಲವು ಹೊಸ ಮುಖಗಳು ಹಳ್ಳಿಯ ಹಾದಿ ಬೀದಿಗಳಲ್ಲಿ ಅಡ್ಡಾಡತೊಡಗಿದ್ದವು. ಇಂಥದ್ದೊಂದು ಪಡ್ಡೆ ಹೈಕಳ ಗುಂಪು ತಮ್ಮ ಹಳ್ಳಿಯಲ್ಲಿ ಮೊದಲೇ ಇದ್ದದ್ದರಿಂದ ಬಹಳಷ್ಟು ಜನ ಆ ಹೊಸ ಮುಖಗಳ ಬಗ್ಗೆ ಅಷ್ಟು ತಲೆ ಕೆಡಿಸಿಕೊಂಡಿರಲಿಲ್ಲ. ಆದರೆ, ಪಂಚ್ಲಿಂಗಪ್ಪನಂಥ ಕೆಲವರಿಗೆ ಮಾತ್ರ ಎಂಥದೋ ಮಸಲತ್ತು ನಡೆಯುತ್ತಿರುವ ಗುಮಾನಿಯೊಂದು ಹೆಡೆಯಾಡಿದರೂ ಮೊದಮೊದಲು ಇಂಥದ್ದೇ ಅಂತ ಗ್ರಹಿಸಲು ಸಾಧ್ಯವಾಗದೇ ಹೋಗಿತ್ತು. ಪಂಚ್ಲಿಂಗಪ್ಪ ಬಾಲ್ರಾಜನ ಅಪ್ಪ ಪಲಾರ್ದಯ್ಯನ ವಾರಿಗೆಯವನು. ಪಲಾರ್ದಯ್ಯ ಹಂಗೆ ಅಸುನೀಗಿದ್ದ ಹೊತ್ತಲ್ಲಿ ಗುಡಿಗೌಡಿಕೆ ಮಾಡುತ್ತಿದ್ದವನು. ಹಂಗಾಗಿ, ಪಂಚ್ಲಿಂಗಪ್ಪನಿಗೆ ಬಾಲ್ರಾಜನ ಮೇಲೆ ಎಂಥದೋ ಮಮಕಾರ ಹುಟ್ಟಿಕೊಂಡಿತ್ತು. ಅವನು ಊರಿಗಾಗಿ ಮಾಡುತ್ತಿದ್ದ ಕೆಲಸಗಳು ಅವನೊಳಗೆ ಅಭಿಮಾನ ಹುಟ್ಟಿಸಿದ್ದವು. ಈ ಕಾರಣಕ್ಕೇ ಅವನು ಬಾಲ್ರಾಜನ ಪರವಾಗಿ ನಿಂತಿದ್ದ.

ಈ ನಡುವೆ ಬಾಲ್ರಾಜ ಕುಟುಂಬ ಸಮೇತ ಒಂದೆರಡು ಸಾರ್ತಿ ಬಂದು ಕೋಡ್ಗಲ್ಲಿನ ಬಳಿ ದಿನಗಟ್ಟಲೆ ಕಾಲ ಕಳೆದಿದ್ದ. ಅಂತೆಯೇ ಆಗ ಊರೊಳಗಿನ ಶಂಭುಲಿಂಗ ದೇವರಿಗೆ ಬೆಳ್ಳಿಯ ಕಣ್ಣುಗಳನ್ನು ಕಾಣಿಕೆಯಾಗಿ ಒಪ್ಪಿಸಿಯೂ ಹೋಗಿದ್ದ. ಆದರೆ, ಧರ್ಮ ಸಂರಕ್ಷಕರು ಹುಟ್ಟಾಕುತ್ತಿದ್ದ ಕಾವು ಒಳ ಜ್ವರದಂತೆ ಊರಳೊಗೆ ಹುರಿಗಟ್ಟುತ್ತಿತ್ತು. ಅದರ ಪರಿಣಾಮಗಳು ಮೆಲ್ಲಗೆ ಒಂದೊಂದಾಗಿ ಕಾಣಿಸಿಕೊಳ್ಳತೊಡಗಿದವು. ಆವತ್ತೊಂದು ದಿನ ದೂರದ ಊರಿಂದ ಕೋಡ್ಗಲ್ಲನ್ನು ನೋಡಲೆಂದು ಬಂದಿದ್ದವರನ್ನು ಆ ಗುಂಪಿನ ಹುಡುಗರು ಅಟಕಾಯಿಸಿಕೊಂಡುಬಿಟ್ಟಿದ್ದರು. ಕಾರಿನಲ್ಲಿದ್ದವರನ್ನು ಯಾರು ಎತ್ತ ಅಂತ ಕೇಳದೆ ಮನಸೋ ಇಚ್ಛೆ ಥಳಿಸಿದ್ದಲ್ಲದೆ ಕಾರನ್ನೂ ಜಖಂಗೊಳಿಸಿದ್ದರು. ಇದೆಲ್ಲಾ ರಾಜಾರಸ್ಸಾಗಿ ಊರೊಳಗೇ ನಡೆದಿತ್ತು. ಹಾಗೆ ಮಾಡುವ ಮೂಲಕ ಬಾಲ್ರಾಜನ ಪರ ಇದ್ದವರಿಗೆ ಎಚ್ಚರಿಕೆ ರವಾನಿಸುವ ಹಾಗೂ ದೂರದೂರಿನವರು ಕೋಡ್ಗಲ್ಲನ್ನು ನೋಡಲು ಬರದಂತೆ ಭಯ ಹುಟ್ಟಿಸುವ ಅವರುಗಳ ಉದ್ದೇಶ ಈಡೇರಿತ್ತು. ಆದರಿದು ಪಂಚ್ಲಿಂಗಪ್ಪ ಮತ್ತವನ ಗುಂಪಿನ ಹಿರೀಕರನ್ನು ಕೆರಳಿಸಿತ್ತು. 'ಊರು ಅಂದರೆ ನಿಮ್ಮಪ್ಪಂದಿರ ಚಪ್ಪೋಡಲ್ಲ' ಅಂತ ಅವರೆಲ್ಲಾ ಗುಟುರು ಹಾಕಿದ್ದರು. ಆದರವರುಗಳ ಗುಟುರುಗಳಿಗೆ ಆ ಗುಂಪು ಜಪ್ಪಯ್ಯ ಅನ್ನಲಿಲ್ಲ. ಬದಲಿಗೆ 'ಅವ್ರಿಗೇ ಏನು, ನಿಮ್ಮನ್ನೆಲ್ಲಾ ಇದ್ಕೆ ತಲೆ ಹಿಡ್ದವ್ನಲ್ಲಾ ಆ ಬಾಲ್ರಾಜ ಅವ್ನಿಗೂ ಒಂದಲ್ಲಾ ಒಂದು ದಿನ ಕಾದೈತೆ ಹಬ್ಬ,' ಅಂತ ಅವರೊಳಗೊಬ್ಬ ಅಂದಿದ್ದೇ ಪಂಚ್ಲಿಂಗಪ್ಪನೊಳಗೆ ಮುಂದೆ ನಡೆಯಬಹುದಾದ ಅನಾಹುತದ ಮುನ್ಸೂಚನೆಯಂತೆ ಕಂಡಿತ್ತು. ಹಂಗಾಗಿಯೇ ಅವನು ಆವತ್ತೇ ಸಂಪಕ್ಕಜ್ಜಿಯನ್ನು ಕಂಡು ಸದರಿ ವಿಷಯವನ್ನು ಸಂಪಕ್ಕಜ್ಜಿಯ ಕಿವಿಗಾಕಿದ್ದ. ಜೊತೆಗೆ, ಬಾಲ್ರಾಜ ಸದ್ಯಕ್ಕೆ ಊರ ಕಡೆ ಬಾರದೇ ಇರುವುದೇ ಲೇಸು ಅಂತಲೂ ಹೇಳಿದ್ದ.

## 4

ಇದಾಗಿ ಕೆಲವು ತಿಂಗಳುಗಳ ಕಾಲ ಊರಿನಲ್ಲಿ ಇಂಥದ್ದೊಂದು ಸಂಗತಿಯೇ ನಡೆದಿಲ್ಲವೆಂಬಂತೆ ಊರಿಗೇ ಊರೇ ಗಪ್ಪಾಗಿತ್ತು. ಇದರ ನಡುವೆ ಊರಿನ ಕೆಲ ಮಂದಿಗೆ ತಾವು ಬಾಲ್ರಾಜನ ಮಾತಿಗೆ ಕೋಲೆಬಸವನಂತೆ ತಲೆಯಾಡಿಸಬಾರದಿತ್ತು ಅನಿಸತೊಡಗಿತ್ತು. ಇದರ ಹಿಂದೆ ಧರ್ಮ ಸಂರಕ್ಷಕ ಪಡೆಯ ಕರಾಮತ್ತು ಕೆಲಸ ಮಾಡಿತ್ತು. ಸಂಪಕ್ಕಜ್ಜಿಯೂ ಇದನ್ನೆಲ್ಲಾ ಮರೆತು ತನ್ನಷ್ಟಕ್ಕೆ ತಾನಿತ್ತು. ಆದರೆ, ಪಂಚ್ಲಿಂಗಪ್ಪನಿಂದ ಊರಿನ ವಿದ್ಯಾಮಾನಗಳೆಲ್ಲಾ ತಿಳಿದ ಮೇಲೆ ಬಾಲ್ರಾಜ ಒಂಥರಾ ಸಂಕಟಕ್ಕೊಳಗಾಗಿದ್ದಲ್ಲದೆ ಊರತ್ತ ಹೊರಡಲು ಹಿಂದೇಟು ಹಾಕಿದ. ತನ್ನಿಂದಾಗಿ ಊರಲ್ಲಿ ಹಿಂಗಾಯ್ತಲ್ಲ ಏನೋ ಮಾಡಲು ಹೋಗಿ ಏನೋ ಆಯ್ತಲ್ಲ ಅಂತ ಪೇಚಾಡಿಕೊಂಡ. ಹೆಂಗಾರ ಮಾಡಿ ಅವ್ವನನ್ನು ತಾನಿದ್ದಲ್ಲಿಗೇ ಕರೆಸಿಕೊಳ್ಳಲು ಪಂಚ್ಲಿಂಗಪ್ಪನಿಂದ ಮತ್ತೆ ಹೇಳಿಸಿ